
ಕಥೆ

# ಜೊತೆ ಜೊತೆಯಲಿ

■ ಸಿ.ಎನ್. ಮುಕ್ತಾ



‘ಅಮ್ಮಾ, ನೀನು ಫೋನ್ ಮಾಡಿದ್ದಕ್ಕೆ ನಾವಿಬ್ಬರೂ ಬಿಡುವು ಮಾಡಿಕೊಂಡು ಬಂದಿದ್ದೇವೆ. ಏನು ವಿಷಯ?’ ಎಂದು ವಿಭಾ ಕಾಫಿ ಹೀರುತ್ತಾ ಕೇಳಿದಳು.

ಸತ್ಯಭಾಮ ಉತ್ತರಿಸಲಿಲ್ಲ.

‘ಅಮ್ಮಾ, ಏನಾದ್ರೂ ಹೇಳು. ನೆನ್ನೆಯಿಂದ ಈ ಪ್ರಶ್ನೆ ಕೇಳ್ತಾ ಇದ್ದೀನಿ. ನೀನು ಮಾತೇ ಆಡ್ತಿಲ್ಲ. ನಮಗೆ ಯಾಕೆ ಫೋನ್ ಮಾಡಿದೆ ಹೇಳು’ – ವಿಷ್ಣು ಒತ್ತಾಯಿಸಿದ.

‘ನೀವು ಎಷ್ಟು ಪ್ರಶ್ನಿಸಿದರೂ ನಿಮ್ಮಮ್ಮ ಉತ್ತರ ಕೊಡಲ್ಲ. ನಿಮ್ಮ ಪ್ರಶ್ನೆಗೆ ನಾನು ಉತ್ತರ ಕೊಡ್ತೀನಿ ಕೇಳಿ’ – ರಾವ್ ಹೇಳಿದರು.

‘ಏನು ವಿಷಯ ಅಪ್ಪ?’

‘ನನಗೀಗ ಎಪ್ಪತ್ತು ವರ್ಷ. ನಿಮ್ಮಮ್ಮನಿಗೆ 65. ನಮ್ಮ ಮದುವೆಯಾಗಿ ನಲವತ್ತು ವರ್ಷಗಳಾದವು. ನಿಮ್ಮ ಅಮ್ಮನಿಗೆ ನನ್ನ ಜೊತೆ ಸಂಸಾರ ಮಾಡಿ ಸಾಕಾಗಿದೆಯಂತೆ. ಆದ್ದರಿಂದ ನಿಮ್ಮಿಬ್ಬರಲ್ಲಿ ಒಬ್ಬರು ಅವಳನ್ನು ಕರೆದುಕೊಂಡು ಹೋಗಬೇಕಂತೆ.’

‘ನೀವೇನು ಮಾಡ್ತೀರ ಅಪ್ಪ?’ ವಿಭಾ ಕೇಳಿದಳು.

‘ನನಗೆ ಈಗ ಒಬ್ಬರ ಸಹಾಯವಿಲ್ಲದೆ ಹೊರಗಡೆ ಓಡಾಡುವುದಕ್ಕೆ ಆಗಲ್ಲಮ್ಮ. ಒಂಟಿಯಾಗಿರಕ್ಕಾಗಲ್ಲ. ಆದ್ದರಿಂದ ಈ ಎರಡು ಮನೆಗಳನ್ನು ಬಾಡಿಗೆಗೆ ಕೊಟ್ಟು ವೃದ್ಧಾಶ್ರಮಕ್ಕೆ ಸೇರಿಕೊಳ್ತೇನೆ.’

‘ಇಬ್ಬರು ಮಕ್ಕಳಿದ್ದೂ ನೀವು ವೃದ್ಧಾಶ್ರಮಕ್ಕೆ ಸೇರಿಕೊಳ್ಳಬೇಕೇನಪ್ಪಾ?’ ವಿಭಾ ನೊಂದುಕೊಂಡು ಕೇಳಿದಳು.

‘ನೋಡಮ್ಮ, ನಾನು ಬೆಂಗಳೂರು ಬಿಟ್ಟು ಎಲ್ಲಿಗೂ ಬರಲ್ಲ. ನೀವು ನಿಮ್ಮ ಕೆಲಸಕಾರ್ಯಗಳನ್ನು ಬಿಟ್ಟು ಇಲ್ಲಿಗೆ ಬರಕ್ಕಾಗಲ್ಲ. ಒಂಟಿಯಾಗಿರುವ ಧೈರ್ಯ ನನಗಿಲ್ಲ. ನನ್ನ ಸಮಸ್ಯೆಗೆ ಪರಿಹಾರವೆಂದರೆ ವೃದ್ಧಾಶ್ರಮವೊಂದೇ.’

‘ನೀವಿಬ್ಬರೂ ಒಟ್ಟಿಗೆ ಇರಬಹುದಿತ್ತು...’

‘ಆ ವಿಚಾರ ಬಿಡು. ನೀವು ಯಾವಾಗ ಅಮ್ಮನ್ನ ಕರೆದುಕೊಂಡು ಹೋಗ್ತೀರಾಂತ ತಿಳಿಸಿದರೆ, ನಾನು ಮುಂದಿನ ವ್ಯವಸ್ಥೆ ಮಾಡಿಕೊಳ್ಳಲು ಅನುಕೂಲವಾಗತ್ತೆ.’

ಇಬ್ಬರೂ ಮೌನದ ಸ್ನೇಹ ಮಾಡಿಕೊಂಡರು. ವಿಷ್ಣುಮೂರ್ತಿ ಬಾಂಬೆಯ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿದ್ದ. ಅಲ್ಲಿ ಕೆಲಸ ಮಾಡುವಾಗಲೇ ತಂದೆ–ತಾಯಿ ಒಪ್ಪಿಗೆ ಪಡೆದು ತನ್ನ ಸಹೋದ್ಯೋಗಿ ಅರುಣಾ ಭಾರದ್ವಾಜ್‌ಳನ್ನು ಮದುವೆಯಾಗಿದ್ದ. ಅರುಣಾಳ ತಂದೆ–ತಾಯಿ ಬಾಂಬೆಯಲ್ಲಿದ್ದರು. ತಮ್ಮ ಮನೆಯ ಮೇಲೆ ಮೂರು ಕೊಠಡಿಗಳ ಮನೆ ಕಟ್ಟಿಸಿ ಮಗಳಿಗೆ ಕೊಟ್ಟಿದ್ದರು. ಮಗನ ಮದುವೆಯಾದ ಹೊಸದರಲ್ಲಿ ಸತ್ಯಭಾಮ ಬಾಂಬೆಗೆ ಹೋಗಿ ಹದಿನೈದು ದಿನಗಳಿದ್ದರು. ಅತ್ತೆ–ಸೊಸೆಗೆ ಸರಿಬಂದಿರಲಿಲ್ಲ. ಸತ್ಯಭಾಮ ಸೊಸೆಯ ಪ್ರತಿ ನಡೆ–ನುಡಿಯಲ್ಲೂ ತಪ್ಪು ಹುಡುಕುತ್ತಿದ್ದರು. ಅರುಣಾ ತುಂಬಾ ಬೇಜಾರು ಮಾಡಿಕೊಂಡು ತಾಯಿ ಮನೆಗೆ ಹೋಗಿ ಕುಳಿತಿದ್ದಳು. ಈಗ ಅವನಿಗೆ ಇಬ್ಬರು ಮಕ್ಕಳಿದ್ದರು. ಅವರಿಗೆ ಕನ್ನಡದ ಪರಿಚಯವೇ ಇರಲಿಲ್ಲ.

‘ಯಾಕೋ ವಿಷ್ಣು ಏನೂ ಹೇಳ್ತಿಲ್ಲ?’

‘ಏನು ಹೇಳಲಿ ಅಕ್ಕ. ಅಮ್ಮಂಗೂ ಅರುಣಂಗೂ ಸರಿ ಬರಲ್ಲ. ಮಕ್ಕಳಿಗೆ ಕನ್ನಡ ಬರಲ್ಲ. ನಮ್ಮನೆ ಹತ್ತಿರಾನೇ ಮನೆ ಮಾಡಿ ಅಮ್ಮ ಇರುವುದಕ್ಕೆ ವ್ಯವಸ್ಥೆ ಮಾಡೋಣ ಎಂದುಕೊಂಡರೆ ಅಮ್ಮಂಗೆ ಭಾಷೆ ಬರಲ್ಲ.’

‘ಹಿಂದಿ ಅಲ್ಪಸ್ವಲ್ಪ ಅರ್ಥವಾಗತ್ತೆ ಕಣೋ...’

‘ಅಮ್ಮ ನಾವು ಬೆಳಗ್ಗೆ ಹೋದರೆ ರಾತ್ರಿ ಬರ್ತೇವೆ. ಪ್ರತಿದಿನ ನಿನ್ನನ್ನು ವಿಚಾರಿಸಕ್ಕೆ ಆಗಲ್ಲ. ಶನಿವಾರ, ಭಾನುವಾರಗಳಲ್ಲಿ ನಮ್ಮದೇ ಕೆಲಸಗಳಿರುತ್ತವೆ. ಅಯಾಮ್ ಸಾರಿ, ನಿನ್ನನ್ನು ಕರೆದುಕೊಂಡು ಹೋಗಕ್ಕೆ ಸಾಧ್ಯವಿಲ್ಲ.’

‘ನೀನೇನು ಹೇಳ್ತೀಯ ವಿಭಾ?’

‘ಅಮ್ಮ ನಾನು ಕರೆದುಕೊಂಡು ಹೋಗ್ತೀನಿ. ಆದರೆ ನನಗೆ ಕೊಂಚ ಸಮಯ ಬೇಕು.’

‘ಯಾಕೆ?’

‘ಅಮ್ಮ ನಿನಗೆ ಗೊತ್ತಿರುವ ಹಾಗೆ ನಾನು ಅತ್ತೆ ಮಾವನ ಜೊತೆ ಇದ್ದೇನೆ. ನಮ್ಮನೆಯಲ್ಲಿ ನಾಲ್ಕು ರೂಮುಗಳಿವೆ. ಒಂದರಲ್ಲಿ ಅತ್ತೆ–ಮಾವ ಇರ್ತಾರೆ. ಇನ್ನೊಂದರಲ್ಲಿ ನಾವಿದ್ದೇವೆ. ಮಹಡಿ ಮೇಲಿರುವ ಒಂದು ರೂಂನಲ್ಲಿ ಮಕ್ಕಳಿದ್ದಾರೆ. ನಾಲ್ಕನೇ ರೂಂನಲ್ಲಿ ನಮ್ಮ ಮಾವನ ತಮ್ಮ ಇದ್ದಾರೆ.’

‘ನಾನೆಲ್ಲಿರಬೇಕು?’

‘ನಮ್ಮನೆಯ ಪುಟ್ಟ ಔಟ್‌ಹೌಸ್ ಇನ್ನೆರಡು ತಿಂಗಳಿಗೆ ಖಾಲಿಯಾಗುತ್ತದೆ. ನೀನು ಅಲ್ಲಿರಬಹುದು.’

‘ನಿಮ್ಮ ಚಿಕ್ಕಮಾವಾನೇ ಅಲ್ಲಿರಬಹುದಲ್ವಾ?’

‘ಅದನ್ನು ನಿರ್ಧರಿಸಬೇಕಿರುವುದು ನಾವು. ನೀನಲ್ಲ. ನೀನು ಯಾರ ಜೊತೆಯೂ ಹೊಂದಿಕೊಳ್ಳಲ್ಲ. ಆದ್ದರಿಂದ ನೀನು ಔಟ್‌ಹೌಸ್‌ನಲ್ಲಿ ಇರುವುದೇ ಒಳ್ಳೆಯದು. ಊಟ ತಿಂಡಿ ನಾನೇ ಕಳಿಸ್ತೀನಿ.’

ಸತ್ಯಭಾಮ ಒಪ್ಪಲೇಬೇಕಾಯಿತು.

* * *

ಅಂದು ರಾತ್ರಿ ಮಂಗಳೂರಿಗೆ ಹೋಗುವ ಬಸ್‌ನಲ್ಲಿ ಕುಳಿತಿದ್ದ ವಿಭಾ ತಂದೆ–ತಾಯಿಯರ ಬಗ್ಗೆಯೇ ಯೋಚಿಸಿದಳು. ಅವಳು ಹೊರಡುವ ಮೊದಲು ತಮ್ಮನ ಜೊತೆ ಮಾತಾಡಿದ್ದಳು.

‘ಅಮ್ಮನ್ನ ನೋಡುವುದಕ್ಕೆ ನಾನೇ ಪ್ರತಿತಿಂಗಳೂ ಮಂಗಳೂರಿಗೆ ಬರ್ತೀನಿ. ಆದರೆ ಬಾಂಬೆಗೆ ಮಾತ್ರ ಕರೆದುಕೊಂಡು ಹೋಗಲ್ಲ’ ಎಂದಿದ್ದ ವಿಷ್ಣು.

ತಂದೆಯ ಚಿತ್ರ ಕಣ್ಮುಂದೆ ಬಂದಾಗ ಅವಳ ಕಣ್ಣುಗಳು ತುಂಬಿ ಬಂದವು. ಎಷ್ಟು ಸಹೃದಯಿ ನನ್ನ ತಂದೆ. ಅಂತಹ ವ್ಯಕ್ತಿಯ ಜೊತೆ ಅಮ್ಮಂಗೆ ಇರಕ್ಕಾಗಲ್ವಾ? ಈ ವಯಸ್ಸಿನಲ್ಲಿ ಅಪ್ಪ ವೃದ್ಧಾಶ್ರಮ ಸೇರುವಂತಾಯ್ತಲ್ಲಾ? ಎಂದು ದುಃಖವಾಯ್ತು. ಅವಳು ತಂದೆಯ ಜೊತೆ ಮಾತಾಡಿದ್ದಳು.

‘ಅಪ್ಪಾ ನಿಮಗೆ ಬೇಜಾರಾಗಿದೇಂತ ಗೊತ್ತು. ಅಮ್ಮ ಈ ವಯಸ್ಸಿನಲ್ಲಿ ಇಂತಹ ನಿರ್ಧಾರ ತೆಗೆದುಕೊಳ್ಳಬಾರದಿತ್ತು. ಅಮ್ಮ ಬದಲಾಗಲ್ಲ. ಒಂದೆರಡು ತಿಂಗಳಲ್ಲಿ ನಾನೇ ಅಮ್ಮನನ್ನು ಕರೆದುಕೊಂಡು ಹೋಗ್ತೀನಿ.’

‘ನಮ್ಮದು ಇಳಿವಯಸ್ಸು. ಈ ವಯಸ್ಸಿನಲ್ಲಿ ನಾವು ಒಬ್ಬರಿಗೊಬ್ಬರು ಆಸರೆಯಾಗಿರಬೇಕು. ಚಿಕ್ಕವಯಸ್ಸಿನಲ್ಲಿ ಇಬ್ಬರಿಂದಲೂ ತಪ್ಪಾಗಿರಬಹುದು.

